ದಿನಾಂಕ :05-07-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಸ್ ಆರ್ ವಕೀಲರಿಂದಃ

ನನ್ನ ಊರು ಲಕ್ಕೇನಹಳ್ಳಿ, ಪ್ರಮಾಣ ಪತ್ರ ವನ್ನು ಸುಶೀಲಮ್ಮ ಮತ್ತು ಭಾಗ್ಯಮ ಬರೆಸಿದ್ದಾರೆ ಅಂದರೆ ಸರಿ. ನಿಟ್ಟೂರಿನಲ್ಲಿ ವಾಸ ಇದ್ದೆ ಅಂತ ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ. ಲಕ್ಕೇನಹಳ್ಳಿಯಲ್ಲಿ ವಾಸ ಇದ್ದೆ ಅಂತ ತೋರಿಸಲು ದಾಖಲೆ ಕೊಟ್ಟಿದ್ದೇನೆ. ನಾನು ಯಾವುದೇ ದಾಖಲೆ ಕೊಟ್ಟಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಕೇಸು ಯಾರು ಯಾರ ಮೇಲೆ ಹಾಕಿದ್ದಾರೆ ನನಗೆ ಗೊತ್ತು. ಈ ದಾವೆಯ ವಾದಿ ನಮ್ಮ ಕಡೆಯವರು, ಪ್ರತಿವಾದಿಯರು ನಮ್ಮ ಕಡೆಯವರಲ್ಲ. 2 ನೇ ವಾದಿಗೆ ನಾನು ತಮ್ಮನಾಗಬೇಕು. 2 ನೇ ವಾದಿ ನನ್ನನ್ನು ಸಾಕ್ಷಿ ಹೇಳಲು ಕರೆಸಿದ್ದಾರೆ ಅಂದರೆ ಸರಿ. ದಾವಾಸ್ತಿಯ ಸರ್ವೆ ನಂಬರ, ಚಕ್ಕುಬಂದಿ ಗೊತ್ತಿಲ್ಲ. ರೂಪ ರವರ ಗಂಡ ಮಂಜುನಾಥ ನನ್ನು ನೋಡಿದ್ದೆ, ಅವರು ಈಗ ಜೀವಂತ ಇಲ್ಲ. ಮುದ್ದಯ್ಯನ ಹೆಂಡತಿಯರು ಎಷ್ಟು ಜನ ಗೊತ್ತಿಲ್ಲ. ವಾದಿ ಮತ್ತು ಮಂಜುನಾಥ ಜೀವಂತ ಇದ್ದಾಗ ಭಾಗ ಮಾಡಿಕೊಂಡ ವಿಚಾರ ನನಗೆ ಗೊತ್ತಿಲ್ಲ. ನಾನು ನಿಟ್ಟೂರಿನಲ್ಲಿ ವಾಸ ಇದ್ದ ಕಾರಣ ನನಗೆ ಅವರು ಭಾಗ ಮಾಡಿಕೊಂಡ ವಿಚಾರ ಗೊತ್ತಿತ್ತು ಅಂದರೆ ಸರಿಯಲ್ಲ. ಮಂಜುನಾಥ ರವರ ಭಾಗಕ್ಕೆ ನಿಟ್ಟೂರಿನ ಬಿದ್ದು ಹೋದ ಮನೆ ಬಂದಿತ್ತು ಅಂದರೆ ಸರಿ. ದಾವಾಸ್ತಿಯ ಇನ್ನೊಂದು ಐಟಂ ಆಸ್ತಿ ಎಲ್ಲಿಗೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ಏನು ಬರೆದಿದೆ ಅಂತ ಗೊತ್ತಿಲ್ಲ ಅಂದರೆ ಸರಿಯಲ್ಲ. ನಾನು ಇದನ್ನು ಹೇಳಿ ಬರೆಸಿಲ್ಲ, ಬರೆದಿದ್ದಕ್ಕೆ ಸಹಿ ಮಾಡಿದ್ದೇನೆ ಅಂದರೆ ಸರಿ. ನನಗೆ ಏನು ವಿಚಾರ ಗೊತ್ತಿಲ್ಲದಿದ್ದರೂ ಪ್ರತಿವಾದಿ ರೂಪಗೆ ತೊಂದರೆ ಕೊಡಬೇಕು ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

Sd/-
( ಉಂಡಿ ಮಂಜುಳ ಶಿವಪ್ಪ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫಸಿ, ಗುಬ್ಬಿ.